KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in

Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2022

website: kud.ac.in

No. KU/Aca(S&T)/SSL-445/UGCE/2023-24/82 Date: 05.10.2023

## ಸುತ್ತೋಲೆ–1

ವಿಷಯ: 2023–24ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಸಾರ ಎಲ್ಲ ಸ್ನಾತಕ ಪದವಿಗಳ 3 ಮತ್ತು 5ನೇ ಸೆಮಿಸ್ಟರ್‌ಗಳಿಗೆ ತರಗತಿಗಳಿಗೆ ಪ್ರವೇಶ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ: 1. ಕಚೇರಿ ಸುತ್ತೋಲೆ ಸಂ.KU/Aca(S&T)/SSL-445 /2023-24/955, ದಿ. 15.09.2023.
2. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 05.10.2023.

-----

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2023–24ನೇ ಶೈಕ್ಷಣಿಕ ಸಾಲಿಗೆ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಸಾರ ಎಲ್ಲ ಸ್ನಾತಕ ಪದವಿಗಳ 3 ಮತ್ತು 5ನೇ ಸೆಮಿಸ್ಟರ್‌ಗಳಿಗೆ ತರಗತಿಗಳಿಗೆ UUCMS ಮುಖಾಂತರ ಪ್ರವೇಶದ ಕೊನೆಯ ದಿನಾಂಕವನ್ನು 10.10.2023ರ ವರೆಗೆ ವಿಸ್ತರಿಸಲಾಗಿದೆ. ಹಾಗೂ ಈಗಾಗಲೇ ಪ್ರಕಟಿಸಿದ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸದರಿ ವಿದ್ಯಾರ್ಥಿಗಳು UUCMS ಮುಖಾಂತರ ಭರಿಸಿದ ಶುಲ್ಕದ ರಶೀದಿಯಲ್ಲಿ ತಾಂತ್ರಿಕ ತೊಂದರೆಯಿಂದ ವ್ಯತ್ಯಾಸವಾದಲ್ಲಿ ಭೌತಿಕವಾಗಿ ರಶೀದಿಯಲ್ಲಿ ಸರಿಪಡಿಸಿ ಪ್ರಾಚಾರ್ಯರ ಮೇಲ್ ರುಜುವಿನೊಂದಿಗೆ ವಿದ್ಯಾರ್ಥಿಗಳ ಅರ್ಜಿಗಳನ್ನು ಮಹಾವಿದ್ಯಾಲಯದಲ್ಲಿ ಕಾಯ್ದಿರಿಸುವುದು.

1. **ವರ್ಗಾವಣೆಗೆ ಸಂಬಂಧಪಟ್ಟಂತೆ:** ಈಗಾಗಲೇ ಪ್ರಕಟಿಸಿದ ಪ್ರವೇಶ ಮಾರ್ಗಸೂಚಿ ಅನುಸಾರ 3 ಮತ್ತು 5ನೇ ಸೆಮಿಸ್ಟರ್‌ಗಳಿಗೆ ವರ್ಗಾವಣೆ ಬಯಸುವ ವಿದ್ಯಾರ್ಥಿಗಳಿಗೆ ಎರಡು ಮಹಾವಿದ್ಯಾಲಯಗಳ ಪ್ರಾಚಾರ್ಯರ ಒಪ್ಪಿಗೆ (Annexure-10) ಹಾಗೂ ನಿಗದಿತ ಶುಲ್ಕವನ್ನು SB Collect ಮುಖಾಂತರ ಭರಿಸುವುದರೊಂದಿಗೆ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದುಕೊಂಡು ಕಳೆದ ಸಾಲಿನ ಮಾರ್ಗಸೂಚಿಗಳನ್ನು ಅನುಸರಿಸಿ ದಿನಾಂಕ: **10.10.2023ರ** ಒಳಗಾಗಿ SB Collect ಮುಖಾಂತರ ನಿಗದಿತ ಪ್ರವೇಶ ಶುಲ್ಕವನ್ನು ಭರಿಸಿಕೊಂಡು ಭೌತಿಕವಾಗಿ ಪ್ರವೇಶ ಪಡೆದುಕೊಳ್ಳುವುದು.

2. **ಲ್ಯಾಟರಲ್ ಎಂಟ್ರಿಗೆ ಸಂಬಂಧಪಟ್ಟಂತೆ:** CBCS / Non CBCS ವಿದ್ಯಾರ್ಥಿಗಳು ಲ್ಯಾಟರಲ್ ಎಂಟ್ರಿ ಮುಖಾಂತರ NEP Schemeನ 3 / 5ನೇ ಸೆಮಿಸ್ಟರ್‌ಗೆ ನಿಯಮಾನುಗಳನುಸಾರ ಪ್ರವೇಶ ಬಯಸಿದ್ದಲ್ಲಿ UUCMS ಮುಖಾಂತರ ದಿನಾಂಕ: **10.10.2023**ರ ಒಳಗಾಗಿ SB Collect ಮುಖಾಂತರ ಶುಲ್ಕವನ್ನು ಭರಿಸಿ ಪ್ರವೇಶ ಪಡೆದಕೊಳ್ಳುವುದು. ತಾಂತ್ರಿಕ ತೊಂದರೆಗಳೇನಾದರೂ ಉದ್ಭವಿಸಿದಲ್ಲಿ ಆಫಲೈನ್ ಮುಖಾಂತರ ಪ್ರವೇಶ ಪ್ರಕ್ರಿಯೆ ಜರುಗಿಸಿ ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯ ಸೂಚಿಸುವ ದಿನಾಂಕದಂದು UUCMS ನಲ್ಲಿ ಅಳವಡಿಸುವುದು.

ಪು.ತಿ.ನೋ.

3. **NEP ಅಡಿಯಲ್ಲಿ ಪ್ರವೇಶ ಪಡೆದು ವಿದ್ಯಾಭ್ಯಾಸ ಮೊಟಕುಗೊಳಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ:** ಈ ಹಿಂದಿನ ವರ್ಷಗಳಲ್ಲಿ NEP ಅಡಿಯಲ್ಲಿ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳು ಪದವಿ ಅಧ್ಯಯನವನ್ನು ಮೊಟಕುಗೊಳಿಸಿ ಸದರಿ ವರ್ಷದಲ್ಲಿ ಅಭ್ಯಾಸವನ್ನು ಮುಂದುವರೆಸಲು ಇಚ್ಛೆಪಟ್ಟಲ್ಲಿ ನಿಯಮಾನುಸಾರ UUCMS ಮುಖಾಂತರ ಮಾತ್ರ ದಿನಾಂಕ: **10.10.2023**ರ ಒಳಗಾಗಿ ಎಂದಿನಂತೆ ಪ್ರವೇಶ ಪಡೆದಕೊಳ್ಳುವುದು.

ಮುಂದುವರೆದು, (1) ರೂ. 670/–ರ ದಂಡದೊಂದಿಗೆ ಪ್ರವೇಶದ ಕೊನೆಯ ದಿನಾಂಕ: 13.10.2023.

(2) ರೂ. 4,670/–ರ ಹೆಚ್ಚುವರಿ ದಂಡದೊಂದಿಗೆ ಪ್ರವೇಶದ ಕೊನೆಯ ದಿನಾಂಕ: 18.10.2023.

ಈ ಮೇಲಿನಂತೆ ಪ್ರವೇಶ ಪಡೆದುಕೊಂಡ ಎಲ್ಲ ವಿದ್ಯಾರ್ಥಿಗಳ ಮಾಹಿತಿಗಳನ್ನು ಎಲ್ಲ ದಾಖಲೆಗಳೊಂದಿಗೆ ದಿನಾಂಕ: 20.10.2023ರ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

03/10/23

ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ.

**ಪ್ರತಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
2. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
4. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ (CDC) / ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ. ಧಾರವಾಡ.
6. ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ.